ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE : 7/3/2021

# ಹಿಂದಿನ ದಿನ ಆರ್‌ಟಿ ನಗರದಲ್ಲಿದ್ದ ಸಂತ್ರಸ್ತೆ

ಬೆಂಗಳೂರು: ಮಾಜಿ ಸಚಿವರ ಲೈಂಗಿಕ ವಿವಾದ ಸ್ಫೋಟಗೊಳ್ಳುವ ಹಿಂದಿನ ದಿನವೂ ಸಂತ್ರಸ್ತೆ ನಗರದಲ್ಲಿ ಇದ್ದರು. ಆನಂತರ ಯುವತಿ ನಿಗೂಢವಾಗಿ ನಾಪತ್ತೆಯಾಗಿದ್ದು, ಸಂಪರ್ಕಕ್ಕೆ ಸಿಗುತ್ತಿಲ್ಲ ಎನ್ನಲಾಗುತ್ತಿದೆ. ಮಾಜಿ ಸಚಿವರೊಂದಿಗೆ ಸಂಭಾಷಣೆ ನಡೆಸುವಾಗ ಸಂತ್ರಸ್ತೆ, ಆರ್.ಟಿ. ನಗರದ ಪೇಯಿಂಗ್ ಗೆಸ್ಟ್‌ನಲ್ಲಿ ಇರುವುದಾಗಿ ಪರಿಚಯ ಮಾಡಿಕೊಳ್ಳುತ್ತಾರೆ. ಆದರೆ, ಆಕೆ ಇದ್ದಿದ್ದು ಪೇಯಿಂಗ್ ಗೆಸ್ಟ್ ಅಲ್ಲ. ಬಾಡಿಗೆ ರೂಮ್ ಎಂದು ಕಟ್ಟಡ ಮಾಲೀಕ ಸುರೇಶ್‌ಕುಮಾರ್ ಎಂಬಾತ ಮಾಧ್ಯಮಕ್ಕೆ ಹೇಳಿಕೆ ನೀಡಿದ್ದಾರೆ.

2018ರಿಂದ ಬಾಡಿಗೆಗಿದ್ದ ಯುವತಿ, ಹೆಬ್ಬಾಳದ ಖಾಸಗಿ ಕಾಲೇಜಿನಲ್ಲಿ ಇಂಜಿನಿಯರಿಂಗ್ ಮುಗಿಸಿ ಕೆಲಸಕ್ಕೆ ಹೋಗುತ್ತಿದ್ದರು. ಈ ಯುವತಿ ಅಲ್ಲದೆ, ಬೇರೆ ಮೂವರು ಯುವತಿಯರಿಗೆ ಪ್ರತ್ಯೇಕ ಕೊಠಡಿ ಬಾಡಿಗೆಗೆ ನೀಡಲಾಗಿತ್ತು. ಮಾ.1ರಂದು ಯುವತಿಯನ್ನು ನೋಡಿದ್ದೇ ಕೊನೆ. ಆನಂತರ ಕೊಠಡಿಗೆ ಬಂದಿಲ್ಲ. ಮೊಬೈಲ್ ಕರೆ ಸಹ ಮಾಡಿಲ್ಲ ಎಂದು ಸುರೇಶ್‌ಕುಮಾರ್ ಹೇಳಿದ್ದಾರೆ.

ಮಾ.2ರಂದು ದಿನೇಶ್ ಕಲ್ಲಹಳ್ಳಿ ದೂರು ಕೊಡುತ್ತಿದ್ದಂತೆ ಎಚ್ಚೆತ್ತ ಕಬ್ಬನ್‌ಪಾರ್ಕ್ ಮತ್ತು ಆರ್‌ಟಿ ನಗರ ಪೊಲೀಸರು ಯುವತಿಗಾಗಿ ಹುಡುಕಾಟ ನಡೆಸಿದ್ದರು. ಆರ್‌ಟಿ ನಗರದ ಎಲ್ಲ ಪೇಯಿಂಗ್ ಗೆಸ್ಟ್‌ಗಳಿಗೆ ಮಫ್ತಿಯಲ್ಲಿ ಭೇಟಿ ಕೊಟ್ಟು ಮಾಹಿತಿ ಕಲೆ ಹಾಕಿದ್ದರು. ಸುರೇಶ್‌ಕುಮಾರ್ ಕಟ್ಟಡಕ್ಕೂ ಹೋಗಿ ಬಂದಿದ್ದರು. ಆದರೆ, ಆಕೆಯ ಮಾಹಿತಿ ಲಭ್ಯವಾಗಿಲ್ಲ ಎನ್ನಲಾಗಿದೆ.

ಮತ್ತೊಂದು ಮಾಹಿತಿ ಪ್ರಕಾರ, ಸದ್ಯದಲ್ಲಿಯೇ ಸಂತ್ರಸ್ತ ಯುವತಿ, ವಿಡಿಯೋ ಅಥವಾ ಆಡಿಯೋ ಮೂಲಕ ತನ್ನ ನೋವಿನ ಮಾತುಗಳನ್ನು ಹಂಚಿಕೊಳ್ಳುತ್ತಾರೆ ಎಂದು ಹೇಳಲಾಗುತ್ತಿದೆ. ಅದು ಮಾಜಿ ಸಚಿವರ ವಿರುದ್ಧವಾ ಅಥವಾ ಅಶ್ಲೀಲ ವಿಡಿಯೋ ಬಹಿರಂಗ ಮಾಡಿದವರ ವಿರುದ್ಧವಾ ಎಂಬುದನ್ನು ಕಾದು ನೋಡಬೇಕೆಂದು ಮೂಲಗಳು ತಿಳಿಸಿವೆ.

## ಸಂತ್ರಸ್ತೆ ಹುಡುಕಾಟದಲ್ಲಿ ಪೊಲೀಸ್?

ತನಿಖೆ ಚುರುಕುಗೊಳಿಸಿರುವ ಕಬ್ಬನ್ ಪಾರ್ಕ್ ಪೊಲೀಸರು ಸಂತ್ರಸ್ತ ಪತ್ತೆಗೆ ಬೆಂಗಳೂರು ಮತ್ತು ಹೊರ ಜಿಲ್ಲೆಗಳಲ್ಲಿ ತೀವ್ರ ಶೋಧ ನಡೆಸಿದ್ದಾರೆ. ಪ್ರಭಾವಿಗಳ ಆಶ್ರಯದಲ್ಲಿ ಯುವತಿ ಇರುವ ಶಂಕೆ ವ್ಯಕ್ತವಾಗುತ್ತಿದ್ದು, ಆಕೆಯ ಕುಟುಂಬಸ್ಥರು, ಸ್ನೇಹಿತರ ಮೂಲಕ ಸಂಪರ್ಕ ಮಾಡಲು ಪ್ರಯತ್ನ ನಡೆಸುತ್ತಿದ್ದಾರೆ. ಸಂತ್ರಸ್ತೆ ಸಿಗದಿದ್ದರೆ ಪೊಲೀಸರಿಗೆ ಮತ್ತಷ್ಟು ತಲೆನೋವಾಗಲಿದೆ.

## ಕಲ್ಲಹಳ್ಳಿ, ಮುಲಾಲಿ ವಿರುದ್ಧ ಕಬ್ಬನ್ ಪಾರ್ಕ್ ಠಾಣೆಗೆ ದೂರು

ಸಾಮಾಜಿಕ ಕಾರ್ಯಕರ್ತರಾದ ದಿನೇಶ್ ಕಲ್ಲಹಳ್ಳಿ ಮತ್ತು ರಾಜಶೇಖರ ಮುಲಾಲಿ ವಿರುದ್ಧ ಮಂಡ್ಯ ಜಿಲ್ಲೆಯ ಮಾನವ ಹಕ್ಕುಗಳ ಸೇವಾ ಸಮಿತಿ ಜಿಲ್ಲಾ ಅಧ್ಯಕ್ಷೆ ಕೆ.ಎಚ್.ಇಂದಿರಾ ಶನಿವಾರ ಕಬ್ಬನ್ ಪಾರ್ಕ್ ಠಾಣೆಯಲ್ಲಿ ದೂರು ನೀಡಿದ್ದಾರೆ. ದಿನೇಶ್ ಕಲ್ಲಹಳ್ಳಿ ತನ್ನ ಬಳಿ ಇನ್ನೂ 2-3 ಸಿಡಿಗಳು ಇರುವುದಾಗಿ ಹೇಳಿದ್ದಾರೆ. ಬಳ್ಳಾರಿ ಮೂಲದ ರಾಜಶೇಖರ ಮುಲಾಲಿ 19 ರಾಜಕೀಯ ಮುಖಂಡರ ಸಿಡಿಗಳು ಬಿಡುಗಡೆ ಆಗುವ ಸಾಧ್ಯತೆ ಬಗ್ಗೆ ಹೇಳಿದ್ದಾರೆ. ಈ ಇಬ್ಬರನ್ನು ಬಂಧಿಸಿ, ಇವರ ಹಿಂದಿರುವ ವ್ಯಕ್ತಿಗಳನ್ನು ಪತ್ತೆ ಹಚ್ಚಬೇಕು ಎಂದು ದೂರಿನಲ್ಲಿ ಒತ್ತಾಯಿಸಿದ್ದಾರೆ.

[illegible]: ರಾಜಶೇಖರ್ ಮುಲಾಲಿಗೂ ಮಾ.8ಕ್ಕೆ ವಿಚಾರಣೆಗೆ ಬರುವಂತೆ ಕಬ್ಬನ್ ಪಾರ್ಕ್ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ.